

ಬರೀ ಸಾಕ್ಷಿಯಾಗಿ ಸಂಬಂಧವನ್ನು ನೋಡಬಹುದು. ಆದರೆ, ಅವಳಿಗೆ ಅದು 'ನೋಟವು ಬೇಟದ ಕೂಟದ ಸುಸಮಾಧಿಯು' – ಅಂದರೆ, ಅವಳಿಗೆ ಅದರಾಚೆಗೆ ಬೇರೆ ರಹದಾರಿಗಳಿಲ್ಲ, ಆದರೆ ಅವರಿಗೆ ರಮ್ಯತೆ ರಸಿಕತೆಗೆ ನೂರು ಹಾದಿಗಳಿವೆ. ಇಲ್ಲಿ ಬರುವ 'ಪುರುಷ' ಎನ್ನುವ ಪದವು ಸಾಂಖ್ಯ ದರ್ಶನದಲ್ಲಿ ಪಡೆಯುವ ಅರ್ಥವನ್ನು ಇಲ್ಲಿ ಅನುವಾದಿಸಿರುವ ರೀತಿಯು ಅದ್ಭುತವಾಗಿದೆ. ಉತ್ತರವಾಗಿ ಕವಿ ಜೀವನ ರಣರಂಗವೆಂದು ಆರಂಭವಾಗುವ ಮಹಾಕಾವ್ಯದಂಥ ಮಹೋಪಮೆಯನ್ನು ನೀಡುತ್ತಾನೆ. ಆದರೆ, ಅವಳ ಪ್ರತಿ ಉತ್ತರವೆಂದರೆ, ಈ ಗಹನವಾದ ಮಾತಿನ ರೀತಿ ಅವಳಿಗೆ ಅರ್ಥವಾಗದು. ಅವಳಿಗೆ ಅರ್ಥವಾಗಿರುವುದೆಂದರೆ, ಅವರ ಜೀವನ ರೀತಿ ಬಿರುಗಾಳಿಯಂತಿದೆ. ಅದರ ಸೆರಗಿಗೆ ಸಿಕ್ಕ ಒಂದು ಹಾಳೆಯಂತೆ ಅವಳಾಗಿ ಬಿಟ್ಟಿದ್ದಾಳೆ.

ಇಲ್ಲಿ ಬೇಂದ್ರೆಯವರಿಗೆ ಮಾತ್ರ ಸಾಧ್ಯವಾಗುವ ಪ್ರತಿಮೆಯ ಮೂಲಕ ಅವಳ ಭಾವನೆಯನ್ನು ಅರ್ಥಮಾಡಿಕೊಳ್ಳಲು ಆತ ಪ್ರಯತ್ನಿಸುತ್ತಾರೆ. ಅವಳಿಗೆ ಜೇಡದ ಬಲೆಯಾಗಿ ಪ್ರೇಮವು ತೋರುತ್ತದೆ. ಅದರ ಜಾಲವು ಜಗದಗಲ ಬೀಸಿದೆ.

ಮರುಳಾದ ನೊಣವನ್ನು ನೊಣೆಯೆ
ಸಂಭ್ರಮವೆಷ್ಟು
ಏಕಿಹುದೋ ನೂರಾರು ಕೈ ತೆರೆದು!

ಇದರ ಬದಲಾಗಿ ಪ್ರೀತಿಯನ್ನು ಅವರು ಜೀವಗಂಗೆಯಾಗಿ ನೋಡುತ್ತಾರೆ. ಇಷ್ಟಾದರೂ ಅವಳ ಭಾವನೆ ಬದಲಾಗುವುದಿಲ್ಲ.

ನಿಮ್ಮದೆ ಎತ್ತರಕೆ ನಾವೇನು ಬಂದೇವು?
ಕಲಿತವರ ಬೆಡಗಿಲ್ಲ ನಮ್ಮ ಕಡೆ.

ಹೀಗಾಗಿ ಕವಿಗೆ ಅನ್ನಿಸುವುದು 'ಒಗಟೆಯಾಗುವ ಬಾಳು ಒಡೆಯದಿದೆ' ಎಂದು. ಅಲ್ಲದೆ, ಹೃದಯದ ಜೊಳ್ಳು ನಾದವು ಮಾತ್ರ ಕೇಳತೊಡಗುತ್ತದೆ. ಇದರ ಪರಿಣಾಮವೆಂದರೆ, ಕವಿಯು ಹೊರಗೊಂದು ಒಳಗೊಂದು ಜೀವಿಸತೊಡಗುತ್ತಾನೆ. ಇದನ್ನೇ ನಾನು ನಿಷ್ಠುರವಾದ ವಸ್ತುನಿಷ್ಠ ಧೋರಣೆಯೆಂದು ಕರೆದದ್ದು. 'ಸಖೀಗೀತ' ಪದ್ಯದ ಕೊನೆಗೆ ಪ್ರೀತಿ, ದಾಂಪತ್ಯದ ಕುರಿತು ಅತ್ಯಂತ ಉಜ್ವಲವಾದ ಸಾಲುಗಳಿವೆ. ಪ್ರತಿಮೆಗಳಿವೆ. ಆದರೆ, ಈ ಬಿರುಕಿನಿಂದ ಅಲ್ಲಿಗೆ ಚಲಿಸಿದ್ದು ಹೇಗೆ ಎನ್ನುವುದಕ್ಕೆ ಪದ್ಯದಲ್ಲಿ ಹೆಚ್ಚಿನ ವ್ಯಾಖ್ಯಾನಗಳಿಲ್ಲ. ಅದು ಆ ಪ್ರತಿಮೆಗಳ ಹಿಂದೆ ಇರುವ ಶ್ರದ್ಧೆಯಲ್ಲಿದೆ ಎಂದು ವಾದಿಸಬಹುದು. ನನ್ನ ಓದಿನಲ್ಲಿ ಈ ಭಾಗದ ರಚನೆಯಲ್ಲಿಯೇ ಒಂದು ಸಣ್ಣ ಬಿರುಕಿದೆ. ಅದರ ಪ್ರಯೋಜನವೆಂದರೆ ಸಖಿಯ ಸ್ವಂತದ ಮಾತು ಕವಿ ಪ್ರೀತಿ, ದಾಂಪತ್ಯಕ್ಕೆ ನೀಡುವ ಸಾಫಲ್ಯ, ಸಮಗ್ರತೆಯ 'ಶುಭಂ' ಮಾದರಿಯ ಭರತವಾಕ್ಯದ ಹೊರಗೆಯೂ ಗಟ್ಟಿಯಾಗಿ ಕೇಳುತ್ತಲೇ ಇರುತ್ತದೆ.

●